'ರಿಲ್ಯಾಕ್ಸ್... ಐ ವಿಲ್ ಟೇಕ್ ಕೇರ್...' ಎಂದು ಆತನ ಬಲಗೈ ಹಿಡಿದು, ಮೆಲ್ಲಗೆ ಮುಂಗೈಯೊತ್ತಿ ಹೇಳಿದೆ.

## 7

'ಸಂಸ್ಕಾರ್ ರೈಟ್ಸ್' ಸುರುಮಾಡಿದಾಗಿನಿಂದ ಎಷ್ಟೆಲ್ಲ ಅಂತ್ಯೇಷ್ಟಿಗಳನ್ನು ನಡೆಸಿರುವೆನಷ್ಟೆ, ಯಾಕೋ ಏನೋ ಈ ಮಿಸೆಸ್ ಸತ್ಪತಿಯ ಕೇಸು ಒಳಗಿಂದೊಳಗೇ ಸ್ವಲ್ಪ ಭಾರವೆನಿಸಿತು. ಒಂದು ಕ್ಷಣ ಮನಸ್ಸು ಖಾಲಿಯಾದಂತನಿಸಿದ ಅನುಭವವಾಯಿತು. ಸುಮ್ಮನೆ ಮೌನವಾಗಿ ನಿಂತು ಸಾವರಿಸಿಕೊಂಡೆ. ವಿನಾಕಾರಣ ಅಧೀರನಾದೆನೇ... ಅಂತನ್ನಿಸಿತು. ಆಕೆಯನ್ನು ಅಂದರೆ ಮಿಸೆಸ್ ಸತ್ಪತಿಯ ಶವವನ್ನು ಎದುರುಗೊಳ್ಳಲು ಒಂದೆರಡು ಹೆಜ್ಜೆ ಹಾಕಿದೆನಷ್ಟೆ, ಎದೆಯಲ್ಲೇನೋ ಛಳಕು ಬಂದಂತಾಯಿತು. ಎಲ್ಲೆಲ್ಲೆಲ್ಲೂ ಒನ್ನಮೂನೆ ಮಿಂಚುಸಂಚಾರ! ಮನಸೊಳಗೆ ಹುಟ್ಟಿದ ಯಾವ ಅನಿರ್ವಚನೀಯವೋ ಕಾಣೆ ಒಮ್ಮಿಂದೊಮ್ಮೆ ಝುಮ್ಮನೆ ಕಂಪಿಸಿ, ಮೈಯಲ್ಲೆಲ್ಲ ಹಬ್ಬಿ, ಎರಡೂ ಕೈಕಾಲುಗಳ ಬೆರಳುತುದಿಯವರೆಗೂ ಮಿಡುಕಿ ತುಡುಕಿದಂತನಿಸಿತು.

ದೇವರೇ... ನನಗೇನಾಯಿತು?! ಹೆಜ್ಜೆ ತಪ್ಪಿದಂತಾಗಿ ಸಂತುಲಿಸಿಕೊಳ್ಳಲು ಒಂದು ಕ್ಷಣ ತಡೆದೆ.

'ಸರ್... ವ್ವ್ ವಾಟ್ ಹ್ಯಾಪನ್ಡ್?' ಬದಿಗಿದ್ದ ದೇವಾಂಗ ಗಾಬರಿಯಿಂದ ಕೇಳಿದ.

'ಏನಿಲ್ಲ... ಐ ಆಮ್ ಫೈನ್...' ಎಂದು ಮೆಲ್ಲಗೆ, ಮಾತಿಗಿಂತ ಹೆಚ್ಚು ಸಂಜ್ಞೆಯಲ್ಲಿ ಹೇಳಿ ನಡೆ ಮುಂದುವರೆಸಿದೆ.

ಹಿಮಾದ್ರಿ ಸತ್ಪತಿ, ಕುಣಾಲ ಮೊಹಂತಿ ಮತ್ತು ಒಬ್ಬ ಡಾಕ್ಟರೂ ನನ್ನೊಡನೆ ನಡೆದುಬಂದರು. ಮಿಸೆಸ್ ಸತ್ಪತಿಯನ್ನು ಇಡಲಾಗಿದ್ದ ಆಪರೇಶನ್ ಥಿಏಟರ್ ಸೇರುವ ಹೊತ್ತಿಗೆ ಸತ್ಪತಿ ಪರಿವಾರದ ನಾಲ್ಕೈದು ಮಂದಿ ನುಗ್ಗಿಕೊಂಡು ಬಂದರು. 'ಎಲ್ಲರೂ ಹೊರಗೇ ಇರಿ... ನಾನು ವಾಪಸು ಬರುತೀನಿ...' ಎಂದು ಹಿಮಾದ್ರಿ ಸತ್ಪತಿ ಕಟ್ಟುನಿಟ್ಟಾಗಿ ಹೇಳಿದಾಗ, ಎಲ್ಲರೂ ಬಂದಂತೆಯೇ ಸಂದುಹೋದರು. 'ಓಟಿ'ಯ ಬಾಗಿಲೆದುರು ನಾವು ನಾಲ್ವರೇ ಒಂದೆರಡು ಕ್ಷಣ ನಿಂತೆವು. ನಡುವೆ ಅರೆಚಣದ ಮೌನವುಂಟಾಯಿತು. 'ಕೋವಲನ್ ಸರ್... ನನ್ನ ಹೆಂಡತಿಯನ್ನ ನಿಮಗೊಪ್ಪಿಸುತಾ ಇದೀನಿ. ಅವಳನ್ನು ಚೆನ್ನಾಗಿ ಅಣಿಗೊಳಿಸಿ...' ಅನ್ನುತ್ತ ಹಿಮಾದ್ರಿ ಸತ್ಪತಿ, ಈಗ ಮೆಲ್ಲಗೆ ಬಿಕ್ಕಿದನು. ಮತ್ತೊಮ್ಮೆ, 'ರಿಲ್ಯಾಕ್ಸ್... ಲೀವ್ ದಿ ರೆಸ್ಟ್ ಟು ಮೀ...' ಅಂತಂದು ಆತನ ಭುಜ ತಟ್ಟಿದೆ.

ಅಷ್ಟು ಹೊತ್ತಿಗೆ ಕಾರಿನಲ್ಲಿದ್ದ ನನ್ನ ಟೂಲ್‌ಕಿಟ್ಟನ್ನು ಕುಣಾಲ ಮೊಹಂತಿಯ ಪರಿಚಾರಿಕನೊಬ್ಬ ತಂದು, ದೇವಾಂಗನ ಕೈಗಿತ್ತ. 'ಲೆಟ್ ಮಿ ಗೆಟ್ ಟು ವರ್ಕ್...' ಎಂದು ಬಲು ನಿರ್ಧಾರಿತವಾಗಿ ಹೇಳಿದೆ. ಒಡನಿದ್ದ ಡಾಕ್ಟರು ನನಗಾಗಿ ಥಿಏಟರಿನ ಬಾಗಿಲು ತೆರೆದ. ಒಳಗೆ ಆಪರೇಶನ್ ಮೇಜಿನ ಮೇಲೆ ಮಿಸೆಸ್ ಸತ್ಪತಿ ನಿಶ್ಚೇಷ್ಟಿತವಾಗಿ ಮಲಗಿದ್ದಳು. ಬಿಳಿಯ ಬಟ್ಟೆಯೊಂದು ಆಕೆಯನ್ನು ಪೂರ್ತಾ ಕವಿದಿತ್ತು. 'ಡು ಯು ನೀಡ್ ಮಿ ಅರೌಂಡ್, ಸರ್?' ಡಾಕ್ಟರು ಕೇಳಿದ.

'ನೋ ನೋ... ಶವಶೃಂಗಾರದ ಹೊತ್ತಿನಲ್ಲಿ ಯಾರೂ ಒಳಗಿರಬಾರದು. ಒಂದು ಮುಕ್ಕಾಲು ತಾಸಿನ ಕೆಲಸ ಅಷ್ಟೆ... ನನ್ನ ಅಸಿಸ್ಟೆಂಟ್ ದೇವಾಂಗನಿಗೂ ಒಳಬರುವ ಅವಕಾಶವಿಲ್ಲ...' ಕಟ್ಟುನಿಟ್ಟಾಗಿ ಹೇಳಿದೆ.

ದೇವಾಂಗ ಥಿಏಟರಿನ ಒಳಹೊಕ್ಕು, ನನ್ನ ಟೂಲ್‌ಕಿಟ್ಟೊಳಗಿನ ಹತಾರ ಮತ್ತು ಪ್ರಸಾಧನ ಪರಿಕರವನ್ನು ಬದಿಮೇಜಿನಲ್ಲಿ ಜೋಡಿಸಿ, ಎರಡು ಬೋಗುಣಿಗಳಲ್ಲಿ ಸ್ಪಿರಿಟ್ಟನ್ನೂ, ಮತ್ತೆರಡರಲ್ಲಿ ನೀರನ್ನೂ ಅಣಿಗೊಳಿಸಿಟ್ಟು ಹೊರಬಂದ. ಮೃತಳ ಮೇಲುಮೈಯಲ್ಲಿ ಹೊದಿಸುವ ಸಲುವಾಗಿ ಅಂಚಿನಲ್ಲಿ ಕೆಂಪನೆ ಪಟ್ಟಿ ಮತ್ತು ಚಿನ್ನದ ಝರಿಯಿರುವ ಹೊಚ್ಚ ಹೊಸ ಬನಾರಸೀ ಸೀರೆಯನ್ನೂ ಇಡಲಾಗಿತ್ತು. ಜೊತೆಗೆ ಅರಿಸಿನ, ಕುಂಕುಮ, ಬಳೆ, ಬಿಚ್ಚೋಲೆ... ಇತ್ಯಾದಿ ಮಂಗಳದ್ರವ್ಯ.